**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.**

**ಸಿ.ಸಿ.ನಂ.100/2020**

ಸರಕಾರದ ಪರವಾಗಿಃ ದೇವಲಗಾಣಗಾಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿ/ತರುಃ ದುರ್ಗಪ್ಪ ತಂದೆ ದೊಂಡಿರಾಮ ಬಂಡಿವಡ್ಡರ,
23 ವರ್ಷ, ಉಃ ಡ್ರೈವರ್, ವಾಸಃ ನೇದಲಗಿ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2 ಪ್ರಾಸಾ-04 ಆಕಾಶ ತಂದೆ ಪಂಡಿತ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರ ಪರಿಚಯ ಇರುವುದಿಲ್ಲ. ಚಾಸಾ-6, 7 ಮತ್ತು 9 ರವರ ಪರಿಚಯ ಇರುತ್ತದೆ. ಮೃತ ಗಂಗಾಧರನ ಪರಿಚಯ ಇರುತ್ತದೆ. ಈಗ್ಗೆ ಒಂದು ದಿನ ತಮ್ಮ ಶಾಲೆಯಲ್ಲಿ ಪೂಜಾ ಮಾಡುತ್ತಿದ್ದಾಗ, ತಕ್ಷಣವೇ ಒಂದು ಘೋರವಾದ ಶಬ್ದ ಕೇಳಿಸಿತ್ತು. ತಾವು ಶಬ್ದ ಬಂದ ಸ್ಥಳಕ್ಕೆ ಹೋಗಿ ನೋಡಿದ್ದಾಗ, ಅಲ್ಲಿ ಅಪಘಾತವಾಗಿತ್ತು. ಮೃತ ಗಂಗಾಧರ ಸ್ಥಳದಲ್ಲಿಯೇ ಮೃತಪಟ್ಟಿದ್ದ. ತದನಂತರ ತಮ್ಮ ಹಾಸ್ಟಲಿನ ಮೇಲ್ವಿಚಾರಿಕರು ತಮ್ಮನ್ನು ಕರೆದುಕೊಂಡು ಹೋಗಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-09 ಶ್ರೀಮತಿ ಭೀಮರತ್ನ ಗಂಡ ಬಸವರಾಜ ಸಜ್ಜನ CPI ಜೆಸ್ಕಾಂ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 22.12.2019 ರಂದು ರಾತ್ರಿ 10-00 ಗಂಟೆಗೆ ತಾನು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ನೀಡಿದ ಲಿಖಿತ ದೂರಿನ ಆಧಾರದ ಮೇರೆಗೆ ಠಾಣೆ ಗುನ್ನೆ ಸಂಖ್ಯೆಃ 96/2019 ನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ತಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆಂದು ಹಾಗೂ ಅದೇ ದಿನ ಮುಂದಿನ ತನಿಖೆಗಾಗಿ ಚಾಸಾ-19 ರವರಿಗೆ ಕಡತಗಳನ್ನು ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 4 ಪ್ರಾಸಾ-10 ಮಹಾದೇವ ತಂದೆ ಜಂಬಯ್ಯ ಪಿ.ಐ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 22.12.2019 ರಂದು ಚಾಸಾ-18 ರವರು ಈ ಪ್ರಕರಣ ದಾಖಲಾದ ಕುರಿತು ಮಾಹಿತಿ

ನೀಡಿದ್ದು ಅದರಂತೆ ತಾನು ಠಾಣೆಗೆ ಭೇಟಿ ನೀಡಿ ಸದರಿಯವರಿಂದ ಕಡತಗಳನ್ನು ಪಡೆದುಕೊಂಡು ನಂತರ ಗೊಬ್ಬೂರು ಬಿ. ಆಸ್ಪತ್ರೆಗೆ ಭೇಟಿ ನೀಡಿ, ಅದೇ ದಿನ ರಾತ್ರಿ ಅಂದರೆ ದಿನಾಂಕಃ 23.12.2019 ರಂದು ಸುಮಾರು 02-00 ಗಂಟೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಮೃತನ ಶವಪಂಚನಾಮೆ ಮಾಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 5 ಪ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚಾಸಾ-15 ರವರನ್ನು ನಿಯೋಜಿಸಿ ಮೃತನ ಮರಣೋತ್ತರ ಪರೀಕ್ಷೆಯ ವರದಿಯನ್ನು ಪಡೆಯಲು ತಿಳಿಸಿರುತ್ತೇನೆಂದು ಹಾಗೂ ಅದೇ ದಿನ ಬೆಳಿಗ್ಗೆ 09-30 ಗಂಟೆಗೆ ಗುನ್ನೆ ಸ್ಥಳಕ್ಕೆ ಭೇಟಿ ನೀಡಿ ಚಾಸಾ-9 ರವರು ತೋರಿಸಿದ ಗುನ್ನೆ ಸ್ಥಳದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಸಮಯ 09-30 ರಿಂದ 10-30 ರವರೆಗೆ ಗುನ್ನೆ ಸ್ಥಳದ ಪಂಚನಾಮೆ ಮಾಡಿ, ಗುನ್ನೆ ಸ್ಥಳದಲ್ಲಿದ್ದ ಎರಡು ಟ್ರಾಲಿಗಳಲ್ಲಿ ಕಬ್ಬು ತುಂಬಿದ್ದ ಟ್ರ್ಯಾಕ್ಟರ ಇದ್ದು ಸದರಿ ಟ್ರ್ಯಾಕ್ಟರನಲ್ಲಿರುವ ಕಬ್ಬನ್ನು ಖಾಲಿ ಮಾಡಿ ಆ ನಂತರ ಠಾಣೆಗೆ ಹಾಜರುಪಡಿಸಲು ತಿಳಿಸಿದ್ದು, ಅದೇ ದಿನ ಚಾಸಾ-6 ರಿಂದ 13 ರವರ ಹೇಳಿಕೆ ಪಡೆದುಕೊಂಡು, ಚಾಸಾ-15 ರವರು ಮರಣೋತ್ತರ ಪರೀಕ್ಷೆ ವರದಿ ನೀಡಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 6 ಪ್ರಾಸಾ-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 25.12.2019 ರಂದು ಆರೋಪಿತನು ಠಾಣೆಗೆ ಹಾಜರಾಗಿದ್ದು ಯೋಗ್ಯ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆಂದು ಹಾಗೂ ಅದೇ ದಿನ ಚಾಸಾ-1 ಮತ್ತು 6 ರಿಂದ 9 ರವರ ಮರು ಹೇಳಿಕೆ ಪಡೆದುಕೊಂಡು, ಚಾಸಾ-13 ರವರಿಂದ ಇಂಡೆಮನಿಟಿ ಬಾಂಡ ಪಡೆದು ಟ್ರ್ಯಾಕ್ಟರ ಬಿಡುಗಡೆ ಮಾಡಿರುತ್ತೇನೆಂದು ಹಾಗೂ ದಿನಾಂಕಃ 02.01.2020 ರಂದು ಮೃತನ ಪಿ.ಎಂ. ವರದಿ ಪಡೆದುಕೊಂಡು ದಿನಾಂಕಃ 15.01.2020 ರಂದು ಐ.ಎಂ.ವಿ ವರದಿ ಪಡೆದುಕೊಂಡಿರುತ್ತೇನೆಂದು ಹಾಗೂ ನಂತರ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆಂದು ಹಾಗೂ ಆರೋಪಿತನನ್ನು ನೋಡಿದಲ್ಲಿ ಗುರುತಿಸುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-7 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-8 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 30.12.2025

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.